

بِسْمِ اللَّهِ الرَّحْمَنِ الرَّحِيم

# ತಬ್‌ಲೀಗ್‌ನ ಪ್ರಾಧಾನ್ಯತೆ ಮತ್ತು ಹುದ್ದೇದಾರರ ಜವಾಬ್ದಾರಿಕೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 08–09–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

ادْعُ إِلَىٰ سَبِيلِ رَبِّكَ بِالْحِكْمَةِ وَالْمَوْعِظَةِ الْحَسَنَةِ ۖ وَجَادِلْهُم بِالَّتِي هِيَ أَحْسَنُ ۚ إِنَّ رَبَّكَ هُوَ أَعْلَمُ بِمَن ضَلَّ عَن سَبِيلِهِ ۖ وَهُوَ أَعْلَمُ بِالْمُهْتَدِينَ

**ಉದ್‌ಉ ಇಲಾ ಸಬೀಲಿ ರಬ್ಬಿಕ ಬಿಲ್‌ಹಿಕ್‌ಮತಿ ವಲ್ ಮೌಯಿಲತಿಲ್ ಹಸನತಿ ವ ಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್‌ಸನ್ ಇನ್ನ ರಬ್ಬಕ ಹುವ ಅಅ್‌ಲಮು ಬಿಮನ್ ಝಲ್ಲ ಅನ್‌ಸಬೀಲಿಹೀ ವ ಹುವ ಅಅ್‌ಲಮು ಬಿಲ್‌ಮುಹ್‌ತದೀನ್.**

ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು ಜನರನ್ನು ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದು ಅವನು ಚೆನ್ನಾಗಿ ತಿಳಿದಿರುತ್ತಾನೆ. (ಪವಿತ್ರ ಖುರ್‌ಆನ್ 16:126).

ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ತಮ್ಮ ದೇಶದ ಪ್ರತಿಯೊಂದು ವಿಭಾಗದ ಜನರಿಗೆ ತಲಪಿಸುವ ಕೆಲಸವನ್ನು ವಿಶಾಲಗೊಳಿಸುವುದು ಹೇಗೆ ಅಥವಾ ಉತ್ತಮ ಅಸ್ತಿಭಾರಗಳನ್ನು ಸ್ಥಾಪಿಸಿ ಆ ಕೆಲಸ ಮಾಡುವುದು ಹೇಗೆ ಎಂಬುದರ ಬಗ್ಗೆ ಅನೇಕ ದೇಶಗಳ ಜಮಾಅತ್‌ಗಳು ತಮ್ಮ ಮಜ್ಲಿಸೆ ಶೂರಾಗಳಲ್ಲಿ ಪ್ರಸ್ತಾಪ ಮಾಡಿ ಅದಕ್ಕೆ ಸಂಬಂಧಿಸಿ ಒಳ್ಳೆಯ ರೀತಿಯಲ್ಲಿ ಚರ್ಚೆ ಮಾಡಿದರು ಮತ್ತು ತಮ್ಮ ಕಾರ್ಯಕ್ರಮಗಳನ್ನು ರೂಪಿಸಿರುವರು. ಯಾವಾಗಲೂ ನೆನಪಿಡಬೇಕಾದುದೇನೆಂದರೆ ತಬ್ಲೀಗ್‌ಗೋಸ್ಕರ ಯೋಜನೆಯಾದರೂ ಅಥವಾ ಬೇರೆ ಯಾವುದಾದರೂ ಕೆಲಸಕ್ಕೋಸ್ಕರ ಯೋಜನೆಯಾದರೂ ಮಜ್ಲಿಸೆ ಶೂರಾದಲ್ಲಿ ಅನೇಕ ಅಭಿಪ್ರಾಯಗಳನ್ನು ಪ್ರಕಟಿಸಿದ ನಂತರ ಒಂದು ನಿರ್ಧಾರಕ್ಕೆ ಬಂದು, ಆ ಯೋಜನೆಗಳು ಖಲೀಫರ ಮಂಜೂರಾತಿಗೋಸ್ಕರ ಕಳುಹಿಸಲ್ಪಡುತ್ತವೆ. ಮಂಜೂರಾತಿ ದೊರೆತ ನಂತರ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಮಜ್ಲಿಸೆ ಶೂರಾದ ಪ್ರತಿಯೊಬ್ಬ ಸದಸ್ಯ ತನ್ನ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಬೇಕು. ಅದೇ ರೀತಿ ಪ್ರತಿಯೊಂದು ಹಂತದ ಪ್ರತಿಯೊಬ್ಬ ಹುದ್ದೇದಾರನು ಆ ಬಗ್ಗೆ ಧಾರಾಳವಾಗಿ ಪ್ರಯತ್ನಿಸಬೇಕು. ಇದು ತಬ್ಲೀಗ್‌ಗೆ ಸಂಬಂಧಿಸಿದ ಕೆಲಸವಾದುದರಿಂದ ತಬ್ಲೀಗ್ ಸೆಕ್ರಿಟರಿ ಮಾತ್ರ ಈ ಕೆಲಸಕ್ಕೆ ಹೊಣೆಗಾರ ಎಂದು ಭಾವಿಸಬಾರದು. ಇದೇ ರೀತಿ ಬೇರೆ ವಿಭಾಗದ ಕೆಲಸದ ಹೊಣೆಗಾರಿಕೆ ಆ ವಿಭಾಗದ ಸೆಕ್ರಿಟರಿಗೆ ಮಾತ್ರವಿದೆ ಎಂದು ಭಾವಿಸಬಾರದು. ಆ ವಿಭಾಗಗಳಿಗೆ ಸಂಬಂಧಿಸಿದ ಕೆಲಸ ಮಾಡುವ ಹೊಣೆಗಾರಿಕೆ ಆ ವಿಭಾಗಗಳ ಸೆಕ್ರಿಟರಿಗಳಿಗೆ ಖಂಡಿತವಾಗಿಯೂ ಇದೆ. ಆದರೆ ತಬ್ಲೀಗ್ ಮತ್ತು ತರಬೇತಿಯ ವಿಭಾಗಗಳು ಹೇಗಿವೆ ಎಂದರೆ ಅವುಗಳಿಗೆ ಸಂಬಂಧಿಸಿ ಜಮಾಅತಿನ ಪ್ರತಿಯೊಬ್ಬ ಹುದ್ದೇದಾರ, ಪ್ರತಿಯೊಂದು ಹಂತದ ಹುದ್ದೇದಾರ ಭಾಗವಹಿಸುವುದು ಮತ್ತು ತನ್ನ ಕೃತ್ಯರೂಪದ ಉದಾಹರಣೆ ತೋರಿಸುವುದು ಆವಶ್ಯಕವಾಗಿದೆ.

ನಾನು ಈದಿನ ತಬ್ಲೀಗ್ ಬಗ್ಗೆ ಮಾತನಾಡಲು ಉದ್ದೇಶಿಸುತ್ತೇನೆ. ಇದಕ್ಕೆ ಸಂಬಂಧಿಸಿ ನಾನು ಪ್ರತಿಯೊಬ್ಬ ಹುದ್ದೇದಾರನ ಗಮನ ಹರಿಸಲು ಇಚ್ಛಿಸುತ್ತೇನೆ. ತಬ್ಲೀಗ್‌ಗೋಸ್ಕರ ಜಮಾಅತ್ ರೂಪಿಸಿದ ಯೋಜನೆಯನ್ನು ಕೃತ್ಯರೂಪಕ್ಕೆ ತರಲು ಪ್ರತಿಯೊಬ್ಬ ಹುದ್ದೇದಾರ ತಮ್ಮ ಜಮಾಅತಿನ ಸೆಕ್ರಿಟರಿ ತಬ್ಲೀಗ್‌ರಿಗೆ ಪರಿಪೂರ್ಣ ಸಹಕಾರ ನೀಡಬೇಕು. ಪ್ರತಿಯೊಬ್ಬ ಹುದ್ದೇದಾರ ತನ್ನ ಕೆಲಸಗಳ ಮೂಲಕ ಜಮಾಅತಿನ ಸದಸ್ಯರಿಗೆ ಮಾದರಿಯಾಗಬೇಕು. ಪ್ರತಿಯೊಬ್ಬ ಹುದ್ದೇದಾರ ಯಾವುದಾದರೊಂದು ರೀತಿಯಲ್ಲಿ ತಬ್ಲೀಗ್‌ನಲ್ಲಿ ಭಾಗವಹಿಸಬಹುದಾಗಿದೆ. ಹುದ್ದೇದಾರ ತಬ್ಲೀಗ್‌ನಲ್ಲಿ ಭಾಗವಹಿಸುವಾಗ ಜಮಾಅತಿನ ಸದಸ್ಯರಿಗೆ ಮಾದರಿಯಾಗುತ್ತಾರೆ ಮತ್ತು ಅನೇಕ ಅಹ್ಮದಿಯರು ಅವರೊಂದಿಗೆ ಆವಶ್ಯಪಡದಿದ್ದರೂ ಹುದ್ದೇದಾರರ ಉದಾಹರಣೆಗಳನ್ನು ನೋಡಿ ಸ್ವತಃ ಕಾರ್ಯಯೋಜನೆಯನ್ನು ಈಡೇರಿಸಲು ಮತ್ತು ಇಸ್ಲಾಮಿನ ನೈಜ ಸಂದೇಶ ಜನರಿಗೆ ತಲಪಿಸುವ ಕಾರ್ಯದಲ್ಲಿ ಭಾಗವಹಿಸುವವರಾಗುವರು. ಜಮಾಅತಿನ ಕೆಲವು ಸೆಕ್ರಿಟರಿಗಳಿಗೆ ತಮ್ಮ ವಿಭಾಗಕ್ಕೆ ಸಂಬಂಧಿಸಿ ಹೆಚ್ಚೇನೂ ಕೆಲಸವಿರುವುದಿಲ್ಲ. ಅವರು ತಬ್ಲೀಗ್ ಕೆಲಸಕ್ಕೆ ಹೆಚ್ಚು ಸಮಯ ವಿನಿಯೋಗಿಸಲು ಸಾಧ್ಯವಿದೆ. ಆದರೆ ಇದಕ್ಕೆ ದೃಢ ಸಂಕಲ್ಪ ಮತ್ತು ನಿರ್ಧಾರದ ಆವಶ್ಯಕತೆಯಿದೆ. ಪ್ರತಿಯೊಂದು ದೇಶದ ನ್ಯಾಶನಲ್ ತಬ್ಲೀಗ್ ಸೆಕ್ರಿಟರಿಯ ಕೆಲಸವೇನೆಂದರೆ ರೂಪಿಸಿದ ತಬ್ಲೀಗ್ ಯೋಜನೆಯನ್ನು ಪ್ರತಿಯೊಂದು ಜಮಾಅತಿನ ತಬ್ಲೀಗ್ ಸೆಕ್ರಿಟರಿಗೆ ತಲಪಿಸಬೇಕು. ಅದೇ ರೀತಿ ಜಮಾಅತಿನ ಪ್ರತಿಯೊಬ್ಬ ಸದಸ್ಯನಿಗೆ ತಬ್ಲೀಗ್‌ಗೆ ಸಂಬಂಧಿಸಿ ಪ್ರತಿಯೊಂದು ವಿಷಯ – ಆಡಳಿತಾತ್ಮಕ ವಿಷಯವನ್ನು ಹೊರತುಪಡಿಸಿ– ತಲಪುವ ಬಗ್ಗೆ ದೃಢಪಡಿಸಬೇಕು.

ಆದರೆ ಎಲ್ಲದಕ್ಕಿಂತಲೂ ಮುಖ್ಯವಾದುದೇನೆಂದರೆ ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ತಬ್ಲೀಗ್ ಬಗ್ಗೆ ನೀಡಿದ ಮಾರ್ಗದರ್ಶನವನ್ನು ಮನವರಿಕೆ ಮಾಡಿಕೊಳ್ಳಬೇಕು ಮತ್ತು ಅದರ ಪ್ರಕಾರ ಪ್ರತಿಯೊಬ್ಬ ತಬ್ಲೀಗ್ ಸೆಕ್ರಿಟರಿ ಕಾರ್ಯನಿರತನಾಗಬೇಕು. ಪ್ರತಿಯೊಬ್ಬ ಹುದ್ದೇದಾರ ಕಾರ್ಯನಿರತನಾಗಬೇಕು. ಮತ್ತು

ವಿಶಿಷ್ಟವಾಗಿ ತಬ್ಲೀಗ್ ಕಾರ್ಯನಿರತರು ಕಾರ್ಯ ನಿರ್ವಹಿಸಬೇಕು. ಅಲ್ಲಾಹನು ಯಾವ ವಿಷಯಗಳ ಕಡೆಗೆ ಗಮನ ಹರಿಸಿರುವನೋ ಅವುಗಳಲ್ಲಿ ಎಲ್ಲದಕ್ಕಿಂತಲೂ ಮೊದಲನೆಯದು ಹಿಕ್ಮತ್ (ಜಾಣ್ಮೆ) ಆಗಿದೆ. ಅನಂತರ ಅಲ್ಲಾಹನು ಹೇಳಿದುದು **ಮೌಇಝುತುಲ್ ಹಸನ** (ಉತ್ತಮವಾದ ಉಪದೇಶ) ಬಗ್ಗೆಯಾಗಿದೆ. ಅನಂತರ ಅಲ್ಲಾಹನು ಹೇಳಿರುವುದು, ನೀವು ಎಂತಹ ಸಾಕ್ಷ್ಯಾಧಾರಗಳನ್ನು ಮಂಡಿಸಬೇಕೆಂದರೆ ಅವು ಅತ್ಯುತ್ತಮವಾಗಿರಬೇಕು. ಇಂದಿನ ಕಾಲದಲ್ಲಿ ಆಲಿಮ್ ನಾಮಧೇಯರು ಮತ್ತು ಭಯೋತ್ಪಾದಕರ ಗುಂಪುಗಳು, ತಮ್ಮ ಹುಚ್ಚುತನದ ಕಾರಣದಿಂದ ಹಿಕ್ಮತ್ (ಜಾಣ್ಮೆ) ಇಲ್ಲದೆ, ಬುದ್ಧಿಯಿಲ್ಲದೆ ನಿರಾಧಾರ ಮಾತುಗಳಿಂದ ಇಸ್ಲಾಮಿಗೆ ಎಷ್ಟು ಅಪಕೀರ್ತಿ ಉಂಟುಮಾಡಿದ್ದಾರೆಂದರೆ ಮುಸ್ಲಿಮೇತರ ಲೋಕ, ಇಸ್ಲಾಮ್ ಹಿಕ್ಮತ್ ರಹಿತ, ಸಾಕ್ಷ್ಯಾಧಾರ ರಹಿತ ಧರ್ಮವಾಗಿದೆ ಎಂದು ಭಾವಿಸಲು ಕಾರಣವಾಗಿದೆ. ಅದು ಬುದ್ಧಿಶೂನ್ಯರಾದ ಜನರ ಮತ್ತು ಮೂಢ ಜನರ ಧರ್ಮವೆಂದೂ (ನಊದುಬಿಲ್ಲಾಹ್), ಕೇವಲ ಭಯೋತ್ಪಾದನೆ ಮಾಡುವುದೇ ಅದರ ಉಪದೇಶವೆಂದೂ ಅವರು ತಿಳಿದುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಾಹನು ನೀಡಿದ ಮಾರ್ಗದರ್ಶನ ಪ್ರಕಾರ ತಬ್ಲೀಗ್ ಮಾಡುವುದು ಮತ್ತು ತಬ್ಲೀಗ್ ಮೂಲಕ ಸಂಪರ್ಕ ಸ್ಥಾಪಿಸುವುದು ಪ್ರತಿಯೊಬ್ಬ ಅಹ್ಮದಿಯ ಬಹಳ ಪ್ರಮುಖವಾದ ಹೊಣೆಗಾರಿಕೆಯಾಗಿದೆ.

ಆದುದರಿಂದ ಇಂದಿನ ಪರಿಸ್ಥಿತಿಯಲ್ಲಿ ನಾವು ಯಾವ ರೀತಿ ಅಲ್ಲಾಹನು ಉಪದೇಶಿಸಿದ ರೀತಿಯಲ್ಲಿ ತೀವ್ರ ಪ್ರಯತ್ನದೊಂದಿಗೆ ತಬ್ಲೀಗ್ ಮಾಡಬೇಕು ಎಂಬುದರ ಬಗ್ಗೆ ಅಂದಾಜು ಮಾಡಬೇಕು. ಅಲ್ಲಾಹನು ಹೇಳಿದ ಪ್ರಥಮ ವಿಷಯ ಹಿಕ್ಮತ್‌ನೊಂದಿಗೆ ತಬ್ಲೀಗ್ ಮಾಡಬೇಕು ಎಂದಾಗಿದೆ. ಹಿಕ್ಮತ್ ಎಂದರೇನು? ಹಿಕ್ಮತ್ ಎಂಬ ಪದಕ್ಕೆ ಅನೇಕ ವಿಶಾಲ ಅರ್ಥಗಳಿವೆ. ನಾವು ಜಯಶಾಲಿಯಾಗಿ ತಬ್ಲೀಗ್ ಮಾಡಲು ಈ ಶಬ್ದದ ಎಲ್ಲಾ ಅರ್ಥಗಳನ್ನು ಮನವರಿಕೆ ಮಾಡಿಕೊಳ್ಳಬೇಕಾದುದು ಹಾಗೂ ತಬ್ಲೀಗ್ ಮಾಡುವಾಗ ಆ ವಿಷಯಗಳನ್ನು ಗಮನದಲ್ಲಿರಿಸಬೇಕಾದುದು ಅತೀ ಆವಶ್ಯಕವಾಗಿದೆ.

ಹಿಕ್ಮತ್ ಶಬ್ದದ ಒಂದು ಅರ್ಥ ಇಲ್ಮ್ (ಜ್ಞಾನ) ಎಂದು. ತಬ್ಲೀಗ್ ಮಾಡಲು ಧಾರ್ಮಿಕ ಜ್ಞಾನದ ಆವಶ್ಯಕತೆ ಇದೆ. ಕೆಲವು ಜನರು ಹೇಳುತ್ತಾರೆ ನಮಗೆ ಧಾರ್ಮಿಕ ಜ್ಞಾನ ಲಭಿಸಿಲ್ಲ ನಾವು ತಬ್ಲೀಗ್ ಮಾಡಲಾರೆವು ಎಂದು. ಇಂದಿನ ಕಾಲದಲ್ಲಿ ಇದು ಸರಿಯಾದ ನೆವನವಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ಒದಗಿಸಿರುವ ಸಾಕ್ಷ್ಯಾಧಾರಗಳು ಜಮಾಅತಿನ ಸಾಹಿತ್ಯಗಳಲ್ಲಿ ಲಭ್ಯವಿದೆ. ಸಾಮಾನ್ಯವಾದ ಒಂದು ಪ್ರಯತ್ನ ಮಾಡಿದರೂ ಧಾರ್ಮಿಕ ಜ್ಞಾನದಲ್ಲಿ ಶಕ್ತಿ ಲಭಿಸಲು ಅದರಿಂದ ಸಾಧ್ಯವಿದೆ. ಆದುದರಿಂದ ಮೊದಲನೆಯದಾಗಿ ನಮ್ಮ ಧಾರ್ಮಿಕ ಜ್ಞಾನವನ್ನು ವರ್ಧಿಸಬೇಕು. ಎರಡನೆಯದಾಗಿ ನಮ್ಮ ಸಾಹಿತ್ಯದಲ್ಲಿ ಮತ್ತು ವೆಬ್‌ಸೈಟ್‌ನಲ್ಲಿ ಸಂಬಂಧಪಟ್ಟ ಪ್ರಶ್ನೆಗಳಿಗೆ ಎಲ್ಲಿ ಉತ್ತರಗಳಿವೆ ಮತ್ತು ವಿಷಯ ವಿವರಣೆಗಳಿವೆ ಎಂದು ತಿಳಿದುಕೊಳ್ಳಬೇಕು. ವಿವಿಧ ಧರ್ಮಗಳ ಅನುಯಾಯಿಗಳಾದ ಜನರೊಂದಿಗೆ ಮತ್ತು ಅಲ್ಲಾಹನ ಅಸ್ತಿತ್ವವನ್ನೇ ನಿರಾಕರಿಸುವ ನಾಸ್ತಿಕರೊಂದಿಗೆ ಅವರ ಯೋಚನೆಗಳಿಗೆ ಅನುಗುಣವಾಗಿ ಅವರು ನೀಡುವ ಸಾಕ್ಷ್ಯಾಧಾರಗಳಿಗೆ ಅನುಸಾರವಾಗಿ ನಾವು ಉತ್ತರವಾಗಿ ಸಾಕ್ಷ್ಯಾಧಾರಗಳನ್ನು ನೀಡಬೇಕು.

ಹಿಕ್ಮತ್ ಎಂಬ ಶಬ್ದದ ಇನ್ನೊಂದು ಅರ್ಥ ಬಲಿಷ್ಠ ಮತ್ತು ನಿಖರವಾದುದು ಎಂದು. ನಾವು ನೀಡುವ ಸಾಕ್ಷ್ಯಾಧಾರ ದೃಢವಾದುದಾಗಿರದಿದ್ದರೆ ಅದನ್ನು ಬಲಪಡಿಸಲು ಬೇರೆ ಸಾಕ್ಷ್ಯಾಧಾರಗಳನ್ನು ನೀಡಬೇಕಾಗುತ್ತದೆ. ಆ ಸಾಕ್ಷ್ಯಾಧಾರಗಳನ್ನು ಪುನಃ ಬಲಪಡಿಸಬೇಕಾಗುತ್ತದೆ. ಆದುದರಿಂದ ದೀರ್ಘವಾಗಿ ವಾಗ್ವಾದ ನಡೆಸುವುದಕ್ಕೆ ಬದಲಾಗಿ ಆಕ್ಷೇಪಗಳನ್ನು ಪರಿಶೋಧಿಸಿ ಬಲಿಷ್ಠವಾದ ಸಾಕ್ಷ್ಯಾಧಾರಗಳ ಮೂಲಕ ಖಂಡಿಸಲು ಪ್ರಯತ್ನಿಸಬೇಕು. ತಬ್ಲೀಗ್ ವಿಭಾದವರು ತಮ್ಮ ಸ್ಥಿತಿಗಳಿಗೆ ಅನುಸಾರವಾಗಿ ಆಕ್ಷೇಪಗಳನ್ನು ಮತ್ತು ಅವುಗಳನ್ನು ಖಂಡಿಸುವ ಸಾಕ್ಷಾಧಾರಗಳನ್ನು ಒಟ್ಟಿಗೆ ಸೇರಿಸಿ ಅವುಗಳನ್ನು ಜಮಾಅತ್‌ಗಳಿಗೆ ಕಳುಹಿಸಿಕೊಡಬೇಕಾದುದು ಅವರ ಕೆಲಸವಾಗಿದೆ. ಈ ರೀತಿ ಆಕ್ಷೇಪಗಳಿಗೆ ಬಲವತ್ತಾದ ಉತ್ತರಗಳು ಹೆಚ್ಚು ಹೆಚ್ಚಾಗಿ ಜನರಿಗೆ ದೊರಕುವುದು.

ಹಿಕ್ಮತ್ ಪದದ ಇನ್ನೊಂದು ಅರ್ಥ ಅದ್ಲ್ (ಸಮಾನ ನ್ಯಾಯ) ಎಂದು. ನಾವು ಆಕ್ಷೇಪ ಮಾಡುವಾಗ ಆ ಆಕ್ಷೇಪ ನಮ್ಮ ಮೇಲೆಯೂ ಮರಳುವಂತಹ ಆಕ್ಷೇಪ ಮಾಡಬಾರದು. ಅಹ್ಮದಿಯಾ ಜಮಾಅತಿನಲ್ಲಿ ಅಲ್ಲಾಹನ ಅನುಗ್ರಹದಿಂದ ಸಾಮಾನ್ಯವಾಗಿ ಇಂತಹ ಸ್ಥಿತಿ ಇಲ್ಲ. ಆದರೆ ಇತರ ಮುಸ್ಲಿಮರಲ್ಲಿಯೂ ಅನ್ಯಧರ್ಮದವರಲ್ಲಿಯೂ ಇಂತಹ ಸ್ಥಿತಿ ಕಾಣಿಸುತ್ತದೆ. ನಮ್ಮ ವಿರೋಧಿಗಳಾದ ಮುಸ್ಲಿಮರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಎಂತಹ ಆಕ್ಷೇಪ ಮಾಡುತ್ತಾರೆಂದರೆ ಆ ಆಕ್ಷೇಪಗಳು ಉಳಿದ ಪ್ರವಾದಿಗಳ ಮೇಲೆಯೂ ಅನ್ವಯಿಸುತ್ತವೆ. ಇದಕ್ಕೆ ಸಂಬಂಧಿಸಿ ಸಹ ತಬ್ಲೀಗ್ ವಿಭಾಗ ಆಕ್ಷೇಪಗಳನ್ನೂ ಉತ್ತರಗಳನ್ನೂ ಸಂಗ್ರಹಿಸಿ ಜಮಾಅತ್‌ಗಳಿಗೆ ಒದಗಿಸಬೇಕು. ತಬ್ಲೀಗ್ ಕೆಲಸ ಮಾಡಲು ಹೆಚ್ಚು ಜನರು ಲಭಿಸುವಂತಾಗಲು ತಬ್ಲೀಗ್ ವಿಭಾಗ ಹೆಚ್ಚು ಶ್ರಮಪಟ್ಟು ಕೆಲಸ ಮಾಡಬೇಕು. ಇದಕ್ಕಾಗಿ ಧನ ವ್ಯಯದ ಅಗತ್ಯ ಸಹ ಉಂಟಾಗಬಹುದು.

ಹಿಕ್ಮತ್ ಶಬ್ದದ ಇನ್ನೊಂದು ಅರ್ಥ ಸಹಿಷ್ಣುಮನೋಭಾವ ಮತ್ತು ಮೃದುತ್ವ ಎಂದಾಗಿದೆ. ಆದುದರಿಂದ ತಬ್ಲೀಗ್ ಮಾಡುವಾಗ ಬುದ್ಧಿಪೂರ್ವಕವಾಗಿಯೂ ಮೃದುವಾಗಿಯೂ ವರ್ತಿಸುವುದು ಬಹಳ ಆವಶ್ಯಕವಾಗಿದೆ. ಸಿಟ್ಟಿನಿಂದಲೂ ಕರ್ಕಶವಾಗಿಯೂ ಮಾತನಾಡುವುದರಿಂದ ಅನ್ಯರ ಮೇಲೆ ನಕಾರಾತ್ಮಕ ಪ್ರಭಾವ ಉಂಟಾಗುತ್ತದೆ. ಅವರು ಯೋಚಿಸುವರು– ಇವರ ಬಳಿ ಪುರಾವೆಗಳು ಏನೂ ಇಲ್ಲದುದರಿಂದ ಸಿಟ್ಟಿನಿಂದ ಉತ್ತರ ನೀಡುತ್ತಾರೆಂದು.

ಯಾರಾದರೂ ಸಿಟ್ಟಿನಿಂದ ಮಾತನಾಡಿದರೂ ಆ ವ್ಯಕ್ತಿಯೊಂದಿಗೆ ಸಹ ಮೃದುವಾಗಿ ಮಾತನಾಡಬೇಕು. ಹಿಕ್‌ಮತ್ ಪದದ ಇನ್ನೊಂದು ಅರ್ಥ ನುಬುವ್ವತ್ ಎಂದು ಸಹ ಆಗಿದೆ. ಆದುದರಿಂದ ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅವತೀರ್ಣವಾದ ಪವಿತ್ರ ಖುರ್‌ಆನ್ ಮೂಲಕ, ಅದರ ಉಪದೇಶಗಳ ಮೂಲಕ ತಬ್ಲೀಗ್ ಮಾಡಬೇಕು. ಪವಿತ್ರ ಖುರ್‌ಆನಿನ ವಚನಗಳ ಬೆಳಕಿನಲ್ಲಿ ಮಾತನಾಡಿದಾಗ ಅದು ಅನ್ಯರ ಮೇಲೆ ಬಹಳ ಉತ್ತಮ ಪ್ರಭಾವ ಬೀರುತ್ತದೆ ಎಂದು ನಾನು ಮನಗಂಡಿದ್ದೇನೆ.

ಹಿಕ್‌ಮತ್ ಶಬ್ದದ ಇನ್ನೊಂದು ಅರ್ಥ ಅಜ್ಞಾನವನ್ನು ತಡೆಗಟ್ಟುವುದು ಎಂದು. ಆದುದರಿಂದ ಎಂತಹ ರೀತಿಯಲ್ಲಿ ಮಾತನಾಡಬೇಕೆಂದರೆ ಮಾತನ್ನು ಇತರರು ಸುಲಭವಾಗಿ ಮನವರಿಕೆ ಮಾಡಲು ಸಾಧ್ಯವಾಗಬೇಕು ಮತ್ತು ಅವರ ಅಜ್ಞಾನವನ್ನು ನಿವಾರಿಸುವಂತಹದಾಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾರೆ: ಜನರೊಂದಿಗೆ ಅವರು ಗ್ರಹಿಸುವ ಶಕ್ತಿಪ್ರಕಾರ ಮಾತನಾಡಿರಿ. ಅಂದರೆ ಜನರಿಗೆ ಅರ್ಥವಾಗುವ ರೀತಿಯಲ್ಲಿ ಅವರ ಗ್ರಾಹ್ಯ ಶಕ್ತಿಗೆ ಹೊಂದಿಕೊಂಡು ಮಾತನಾಡಬೇಕೆಂದಾಗಿದೆ.

ಹಿಕ್‌ಮತ್ ಶಬ್ದದ ಇನ್ನೊಂದು ಅರ್ಥ ಸತ್ಯದ ಪ್ರಕಾರ ಎಂದು. ಯಾವಾಗಲೂ ಸತ್ಯದ ಮತ್ತು ವಾಸ್ತವಿಕ ಘಟನೆಗಳ ಪ್ರಕಾರ ಮಾತನಾಡಬೇಕು. ಅನ್ಯರ ಮೇಲೆ ಪ್ರಭಾವ ಬೀರಲು ಸತ್ಯ ಮತ್ತು ವಾಸ್ತವಿಕ ಘಟನೆಗಳಿಂದ ದೂರ ಸರಿದು ಮಾತನಾಡಬಾರದು. ಸತ್ಯ ಮತ್ತು ಸತ್ಯವಾದ ಘಟನೆಗಳಿಗೆ ವಿರುದ್ಧವಾಗಿ ಮಾತನಾಡಿದರೆ ಅದರಿಂದ ತಪ್ಪು ಪ್ರಭಾವ ತಲೆದೋರುತ್ತದೆ. ಏಕೆಂದರೆ ವಾಸ್ತವಿಕಾಂಶಗಳು ಯಾವಾಗಲಾದರೂ ಬಹಿರಂಗವಾಗುತ್ತದೆ. ಆದುದರಿಂದ ಯಾವಾಗಲೂ ಸತ್ಯ ಮತ್ತು ವಾಸ್ತವಿಕ ಘಟನೆಗಳ ಪ್ರಕಾರ ಮಾತನಾಡಬೇಕು. ಹಿಕ್‌ಮತ್ ಪದದ ಇನ್ನೊಂದು ಅರ್ಥ ಸಂದರ್ಭ ಮತ್ತು ಸ್ಥಳಕ್ಕೆ ಅನುಯೋಜ್ಯವಾದ ಮಾತು ಎಂದು. ನಾವು ನೀಡುವ ಯಾವುದಾದರೊಂದು ಸಾಕ್ಷ್ಯಾಧಾರದ ಕಾರಣದಿಂದ ಎದುರಾಳಿ ಸಿಟ್ಟಾಗಲು ಸಾಧ್ಯವಿದ್ದರೆ ಅಥವಾ ತಬ್‌ಲೀಗಿನ ಬದಲಾಗಿ ಜಗಳ ಉಂಟಾಗಬಹುದೆಂದು ಶಂಕೆಯಿದ್ದರೆ, ಅಂತಹ ಸಾಕ್ಷ್ಯಾಧಾರಗಳಿಂದ ದೂರವಿರಬೇಕಾಗಿದೆ. ಎಂತಹ ಉತ್ತರ ನೀಡಬೇಕೆಂದರೆ ಅದು ಸಂದರ್ಭಕ್ಕೆ ಅನುಸಾರವಾಗಿರಬೇಕು ಮತ್ತು ಅನ್ಯನ ಮನಸ್ಸಿಗೆ ಅನುಸಾರವಾಗಿರಬೇಕು. ಅವನು ದೂರ ಸರಿಯುವುದಕ್ಕೆ ಬದಲಾಗಿ ಹೆಚ್ಚು ಸಮೀಪಕ್ಕೆ ಬರುವಂತಿರಬೇಕು. ಸಂದರ್ಭ ಮತ್ತು ವ್ಯಕ್ತಿಗಳ ಮನೋಭಾವದ ಬಗ್ಗೆ ಅರಿವು ಸಹ ತಬ್ಲೀಗ್‌ಗೆ ಬಹಳ ಆವಶ್ಯಕವಾಗಿದೆ. ಆದುದರಿಂದ ಆವಶ್ಯಕವಾದುದೇನೆಂದರೆ ತಬ್ಲೀಗ್ ಮಾಡುವುದರಲ್ಲಿ ಸ್ಥಿರ ಪ್ರಯತ್ನ ಆವಶ್ಯಕವಾಗಿರುವುದರೊಂದಿಗೆ ವೈಯಕ್ತಿಕ ಸಂಪರ್ಕವನ್ನು ವರ್ಧಿಸುವುದು ಸಹ ಆವಶ್ಯಕವಾಗಿದೆ. ವೈಯಕ್ತಿಕ ಸಂಪರ್ಕದಿಂದಲೇ ವ್ಯಕ್ತಿಗಳ ಮನೋಭಾವದ ಬಗ್ಗೆ ತಿಳಿಯುತ್ತದೆ.

ಆದುದರಿಂದ ನಮ್ಮ ತಬ್ಲೀಗಿ ಕಾರ್ಯಕ್ರಮಗಳಲ್ಲಿ ಒಂದು ನಿರಂತರತೆ ಇರಬೇಕಾದುದು ಆವಶ್ಯಕವಾಗಿದೆ. ವರ್ಷದಲ್ಲಿ ಒಮ್ಮೆ ಅಥವಾ ಎರಡು ಸಾರಿ ತಬ್ಲೀಗೀ ಅಶ್‌ರ (ಹತ್ತು ದಿನದ ತಬ್ಲೀಗ್) ಮಾಡಿದರೆ ಸಾಕಾಗಲಾರದು. ಆ ಸಂದರ್ಭಗಳಲ್ಲಿ ಮಾರ್ಗದಲ್ಲಿ ನಿಂತು ನಮ್ಮ ಸಾಹಿತ್ಯ ಹಂಚಿ ನಾವು ತಬ್ಲೀಗ್ ಹೊಣೆಗಾರಿಕೆ ಈಡೇರಿಸಿದೆವು ಎಂದು ಯೋಚಿಸುವುದು ಸರಿಯಲ್ಲ. ಲೋಕದ ಇಂದಿನ ಪರಿಸ್ಥಿತಿ ಬಗ್ಗೆ ನಾವು ಬಹಿರಂಗವಾಗಿ ಹೀಗೆ ಲೋಕಕ್ಕೆ ತಿಳಿಸಬೇಕು: ನೀವು ಲೌಕಿಕ ವ್ಯವಹಾರಗಳಲ್ಲಿ ಮುಳುಗಿರುವ ಕಾರಣ ನಿಮ್ಮ ಸ್ಥಿತಿ ಹೀಗಾಗಿದೆ. ಅಲ್ಲಾಹನು ಕೋಪಗೊಂಡಿರುವುದರಿಂದ ಈ ಸ್ಥಿತಿ ತಲೆದೋರಿದೆ. ಆದುದರಿಂದ ನಿಮಗೆ ಇರುವ ಒಂದೇ ಒಂದು ಮಾರ್ಗ, ನೀವು ಅಲ್ಲಾಹನ ಕಡೆಗೆ ಬನ್ನಿರಿ ಮತ್ತು ಸತ್ಯ ಧರ್ಮವನ್ನು ಗುರುತಿಸಿರಿ ಎಂದು ಜನರಿಗೆ ತಿಳಿಸಬೇಕಾಗಿದೆ. **ಮೌಇಯಿರುಥುತುಲ್ ಹಸನ** (ಉತ್ತಮ ಉಪದೇಶಗಳ ಮೂಲಕ ತಬ್ಲೀಗ್) ಮಾಡಿರಿ ಎಂಬ ಆಜ್ಞೆ ಹಿಕ್‌ಮತ್‌ನೊಂದಿಗೆ ತಬ್ಲೀಗ್ ಮಾಡುವ ಅರ್ಥವನ್ನು ಒಳಗೊಂಡಿದೆ. ಎಂದರೆ ಮೃದುವಾಗಿ ಮತ್ತು ಹೃದಯದ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ತಬ್ಲೀಗ್ ಮಾಡಬೇಕು.

ಅಲ್ಲಾಹನು ಹಿಕ್‌ಮತ್, ಒಳ್ಳೆಯ ಉಪದೇಶ ಹಾಗೂ ಬಲಿಷ್ಠವಾದ ಸಾಕ್ಷ್ಯಾಧಾರದೊಂದಿಗೆ ತಬ್ಲೀಗ್ ಮಾಡಲು ಆಜ್ಞೆ ನೀಡಿದ್ದಾನೆ. ಅದರ ಮೂಲಕ ಕಾರ್ಯನಿರತರಾಗುವುದು ನಮ್ಮ ಕೆಲಸವಾಗಿದೆ. ನಾವು ಸ್ಥಿರಚಿತ್ತತೆಯಿಂದ ಈ ಕೆಲಸ ಮುಂದುವರಿಸುತ್ತಾ ಇರಬೇಕು. ಅದರ ಪರಿಣಾಮವನ್ನುಂಟುಮಾಡುವುದು ತಾನೆಂದು ಅಲ್ಲಾಹನು ಹೇಳಿದ್ದಾನೆ. ಯಾರು ಪಥಭ್ರಷ್ಟರಾಗಿ ಅಲೆದಾಡುವರು ಮತ್ತು ಯಾರು ಮಾರ್ಗದರ್ಶನ ಗಳಿಸುವರು ಎಂಬುದರ ಜ್ಞಾನ ಅಲ್ಲಾಹನಿಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಇನ್ನೊಂದು ಸ್ಥಳದಲ್ಲಿ, ನೀವು ಬಲಾತ್ಕಾರದಿಂದ ಯಾರಿಗೂ ಮಾರ್ಗದರ್ಶನ ನೀಡಲಾರಿರಿ ಎಂದು ಹೇಳಿರುವನು. ನಿಮಗಿರುವ ಕೆಲಸ ಸಂದೇಶ ತಲಪಿಸುವುದಾಗಿದೆ. ಸತ್ಯದ ಸಂದೇಶ ಲೋಕದ ಪ್ರತಿಯೊಬ್ಬ ವ್ಯಕ್ತಿಗೆ ತಲಪಿಸಬೇಕು. ಇಸ್ಲಾಮಿನ ಸುಂದರ ತತ್ವಗಳನ್ನು ಅನ್ಯರಿಗೆ ತಲಪಿಸುತ್ತಾ ಇರಬೇಕು. ಅದರ ಪರಿಣಾಮದ ಬಗ್ಗೆ ನಮಗೆ ಹೊಣೆಗಾರಿಕೆ ಇಲ್ಲ. ನಾವು ಹೀಗೆ ಮಾತ್ರ ಅಲ್ಲಾಹನಿಂದ ಪ್ರಶ್ನಿಸಲ್ಪಡುವೆವು: ಏನು, ನಾವು ಸಂದೇಶವನ್ನು ತಲಪಿಸಿರುವೆವೋ ಎಂದು. ನಾವು ತಬ್ಲೀಗ್ ಮಾಡಬೇಕಾದ ನಮ್ಮ ಕಡ್ಡಾಯ ಕರ್ತವ್ಯದ ಬಗ್ಗೆ ತಿಳಿದಿದ್ದರೂ ಏಕೆ ತಬ್ಲೀಗ್ ಮಾಡಲಿಲ್ಲ ಎಂದು. ಯಾರು ಮಾರ್ಗದರ್ಶನ ಪಡೆಯುವರು ಯಾರು ಪಡೆಯುವುದಿಲ್ಲ ಎಂಬುದರ ಬಗ್ಗೆ ಜ್ಞಾನ ಅಲ್ಲಾಹನಿಗೆ ಮಾತ್ರವಿರುತ್ತದೆ.

ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅನೇಕ ಸ್ಥಳಗಳಲ್ಲಿ ವಿವರಿಸಿದ್ದಾರೆ. ನಾವು ವಿರೋಧಿಗಳಿಗೆ ಉತ್ತರ ನೀಡುವಾಗ ಮೃದುತ್ವವನ್ನೂ ಸೌಮ್ಯತೆಯನ್ನೂ ಕೈಬಿಡಲಿಲ್ಲ ಎಂದು

ಅಲ್ಲಾಹನಿಗೆ ತಿಳಿದಿದೆ ಎಂದು ಬರೆದಿರುವರು. ಆದರೆ ಕೆಲವು ಸಾರಿ ವಿರೋಧಿಗಳು ಅತ್ಯಂತ ಕಟುವಾಗಿ ಮತ್ತು ಕಲಹದಾಯಕ ರೀತಿಯಲ್ಲಿ ಬರೆದಾಗ ಸ್ವಲ್ಪಮಟ್ಟಿಗೆ ಕಟುವಾಗಿ ಉತ್ತರ ನೀಡಿದುದು, ಮುಸ್ಲಿಮ್ ಸಮುದಾಯ ತಮ್ಮ ಮೃಗೀಯ ಉತ್ಸಾಹವನ್ನು ದಬಾಯಿಸಲಿ ಎಂಬ ಉದ್ದೇಶದಿಂದಾಗಿದೆ. ನಾನು ಹೀಗೆ ಮಾಡಿದುದು ನನ್ನ ಸ್ವಂತ ಭಾವೋದ್ವೇಗದ ಕಾರಣದಿಂದಾಗಲಿ ಅಥವಾ ಉತ್ತೇಜಿತನಾಗಿ ಅಲ್ಲ. ಅಲ್ಲಾಹನು ಹೇಳಿದ– **ಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್‌ಸನ್** ಪ್ರಕಾರ ನಾನು ವರ್ತಿಸಿದೆ. ವಿರೋಧಿಗಳು ನಮ್ಮ ಯಜಮಾನರಾದ, ಸೃಷ್ಟಿಗಳಲ್ಲಿ ಸರ್ವಶ್ರೇಷ್ಠರಾದ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಎಂತಹ ಕೆಟ್ಟ ಭಾಷೆ ಬಳಸಿದರೆಂದರೆ ಶಾಂತಿಭಂಗವಾಗುವ ಸ್ಥಿತಿ ಉಂಟಾಗಿತ್ತು. ಅಂತಹ ಸಂದರ್ಭದಲ್ಲಿ ನಮಗೆ ಸ್ವಲ್ಪ ಕಠಿಣ ಪದಗಳನ್ನು ಬಳಸಬೇಕಾಗಿ ಬಂತು.

ಇನ್ನೊಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: **ಜಾದಿಲ್ ಹುಮ್ ಬಿಲ್ಲತೀ ಹಿಯ ಅಹ್‌ಸನ್** ಎಂದರೆ ನಾವು ಮೃದುವಾಗಿ ಮೆಚ್ಚುಗೆಯ ಮಾತನ್ನು ಆಡಿ ಸತ್ಯಕ್ಕೆ ವಿರುದ್ಧವಾದುದನ್ನು ಅಂಗೀಕರಿಸಬೇಕೆಂದಲ್ಲ. ಏನು, ತನ್ನನ್ನು ತಾನೇ ದೇವನೆಂದು ಹೇಳಿಕೊಳ್ಳುವ ಓರ್ವ ವ್ಯಕ್ತಿಯನ್ನು, ತನ್ನ ಭವಿಷ್ಯವಾಣಿ ಪ್ರಕಾರ ನಮ್ಮ ನಾಯಕರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಝ್ಝಾಬ್ (ಮಹಾಸುಳ್ಳುಗಾರ) ಎಂದು ಹೇಳುವವನನ್ನು ಹಾಗೂ ಪ್ರವಾದಿ ಮೂಸಾರನ್ನು ಡಕಾಯಿತಿಗಾರ ಎಂದು ಹೆಸರಿಸುವವನನ್ನು ನೇರಮಾರ್ಗದಲ್ಲಿರುವವನು ಎಂದು ಹೇಳಲು ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಹಾಗೆ ಹೇಳುವುದು ಕಾಪಟ್ಯ ಮತ್ತು ವಿಶ್ವಾಸರಾಹಿತ್ಯವಾಗಿದೆ.

ಇಂತಹ ವಿಷಯಗಳ ವ್ಯತ್ಯಾಸವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ನಾನು ಹಿಂದೆ ಸಹ ಹೇಳಿದ ಹಾಗೆ ಮೃದು ವರ್ತನೆ ಎಂದರೆ ಮೆಚ್ಚುಗೆಯ ಮಾತನಾಡಿ ಭಯಭೀತನಾಗಿ ಆಲಿಸಿದ ಮಾತುಗಳಿಗೆ ಹೌದು ಹೌದು ಎಂದು ಹೇಳುವುದಲ್ಲ. ಸತ್ಯವಿರುದ್ಧವಾದುದನ್ನು ಅಂಗೀಕರಿಸುವುದು ಅಲ್ಲ. ಜಾಣ್ಮೆ ಆವಶ್ಯಕವಾಗಿದೆ. ಮೃದು ಮಾತು ಮತ್ತು ಸುಸ್ವಭಾವ ಕೈಬಿಡಬಾರದು. ಆದರೆ ತಪ್ಪನ್ನು ತಪ್ಪೆಂದೇ ಹೇಳಬೇಕಾದುದು ಸಹ ಆವಶ್ಯಕವಾಗಿದೆ. ಆದುದರಿಂದ ಜಾಣ್ಮೆ ಎಂದರೆ ಹೇಡಿತನವಲ್ಲ. ಅಥವಾ ಜನರನ್ನು ಸಮೀಪಗೊಳಿಸಲು ತಪ್ಪನ್ನು ಅಂಗೀಕರಿಸುವುದೂ ಅಲ್ಲ ಎಂದು ನೆನಪಿಡಬೇಕು.

(ಕೆಲವು ರಾಜಕೀಯ ನಾಯಕರ ಉದಾಹರಣೆ ನೀಡುತ್ತಾ ಹುಝೂರ್ ಹೇಳಿದರು): ಈ ಜನರಾದರೋ ಲೌಕಿಕರಾಗಿದ್ದಾರೆ. ಅವರ ಧರ್ಮ ಸಹ ಮೂಲ ರೂಪದಲ್ಲಿರುವುದಿಲ್ಲ. ಅಂತಹ ಜನರು ಸಹ ತಮ್ಮ ಧರ್ಮಕ್ಕೋಸ್ಕರ ಲೌಕಿಕ ವ್ಯವಹಾರಗಳನ್ನು ತ್ಯಾಗ ಮಾಡುತ್ತಾರೆ. ಅವರು ಮೆಚ್ಚುಗೆಯ ಮಾತನಾಡುವುದಿಲ್ಲ. ಹೇಡಿತನ ಪ್ರಕಟಿಸುವುದಿಲ್ಲ. ಹೀಗಿರುವಾಗ ಕೊನೆಯ ಮತ್ತು ಶಾಶ್ವತವಾಗಿ ನೆಲೆನಿಲ್ಲುವ ಶರೀಅತನ್ನು ನಂಬುವ ನಾವು ಎಷ್ಟು ಬಲಿಷ್ಠವಾದ ವಿಶ್ವಾಸವನ್ನು ಹೊಂದಬೇಕಾಗಿದೆ. ನಾವು ನಮ್ಮ ಲೌಕಿಕ ಸಂಬಂಧಗಳಲ್ಲಿ ಮತ್ತು ತಬ್ಲೀಗ್ ಸಂಬಂಧಗಳಲ್ಲಿ ಜಾಣ್ಮೆಯಿಂದಲೂ ಬಲಯುತವಾದ ಸಾಕ್ಷ್ಯಾಧಾರಗಳಿಂದಲೂ ಈ ವಿಷಯಗಳನ್ನು ಖಂಡಿಸಬೇಕು. ನಾವು ನಮ್ಮ ಲೌಕಿಕ ಲಾಭಕ್ಕೋಸ್ಕರ ಅವುಗಳ ಬಗ್ಗೆ ಹೆದರಬಾರದು ಮತ್ತು ಅವರೊಂದಿಗೆ ಸಂಬಂಧ ಕಡಿದು ಹೋಗುವ ಭಯದಿಂದ ನಾವು ಅವರ ಎಲ್ಲಾ ಮಾತುಗಳಿಗೆ ಹೂಂಗುಟ್ಟಬಾರದು.

ಜಾಣ್ಮೆಯಿಂದ ವರ್ತಿಸುವುದಾದರೆ ಯಾವುದೇ ಸಂಬಂಧ ಮುರಿಯಲಾರದು. ಹುದ್ದೇದಾರರು ಇದರ ಬಗ್ಗೆ ಗಮನಿಸಬೇಕು. ನಾನು ನೋಡಿರುವೆನು, ಅವರಲ್ಲಿ ಕೆಲವು ಸಂದರ್ಭದಲ್ಲಿ ಹೇಡಿತನ ಹೆಚ್ಚಾಗಿ ಪ್ರಕಟವಾಗುತ್ತದೆ. ವಿರೋಧದ ಬಗ್ಗೆ ಗಮನಿಸಬೇಕಾದ ಅಗತ್ಯವಿಲ್ಲ. ವಿರೋಧದಿಂದ ತಬ್ಲೀಗ್ ಮಾರ್ಗಗಳು ತೆರೆಯಲ್ಪಡುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: ಅಸತ್ಯವು ಸತ್ಯವನ್ನು ಎಷ್ಟು ತೀವ್ರವಾಗಿ ವಿರೋಧಿಸುತ್ತದೆಯೋ ಅಷ್ಟೇ ತೀವ್ರವಾಗಿ ಸತ್ಯದ ಶಕ್ತಿ ವರ್ಧಿಸುತ್ತದೆ. ಕೃಷಿಕರಲ್ಲಿ ಈ ವಿಷಯ ಪ್ರಸಿದ್ಧವಾಗಿದೆ. ಬೇಸಗೆಯಲ್ಲಿ ಬಿಸಿಲಿನ ತಾಪ ಎಷ್ಟು ವರ್ಧಿಸುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಶ್ರಾವಣ ಮಾಸದಲ್ಲಿ ಮಳೆಯ ಪ್ರಮಾಣ ವರ್ಧಿಸುತ್ತದೆ. ಇದೊಂದು ಪ್ರಾಕೃತಿಕ ದೃಶ್ಯವಾಗಿದೆ. ಸತ್ಯವನ್ನು ಎಷ್ಟು ಜೋರಾಗಿ ವಿರೋಧಿಸಲಾಗುತ್ತದೆಯೋ ಅಷ್ಟೇ ಪ್ರಮಾಣದಲ್ಲಿ ಸತ್ಯವು ಹೊಳೆಯುತ್ತದೆ ಮತ್ತು ತನ್ನ ವೈಭವವನ್ನು ಪ್ರಕಟಿಸುತ್ತದೆ. ನಾವು ಸ್ವತಃ ಅನುಭವದಿಂದ ಹೇಳುತ್ತೇವೆ: ಎಲ್ಲೆಲ್ಲಾ ನಮ್ಮ ವಿರುದ್ಧ ಹೆಚ್ಚು ಬೊಬ್ಬೆ ಹಾಕಲಾಯಿತೋ ಅಲ್ಲಿ ಒಂದು ಜಮಾಅತ್ ಸ್ಥಾಪಿತವಾಯಿತು. ಎಲ್ಲಿ ಜನರು ನನ್ನ ವಾದವನ್ನು ಆಲಿಸಿ ಮೌನವಾಗಿದ್ದರೋ ಅಲ್ಲಿ ಹೆಚ್ಚು ಅಭಿವೃದ್ಧಿ ಉಂಟಾಗಲಿಲ್ಲ.

ಆದುದರಿಂದ ವಿರೋಧಗಳ ಬಗ್ಗೆ ಮತ್ತು ಲೌಕಿಕ ಜನರ ಬಗ್ಗೆ ಯಾವುದೇ ರೀತಿಯ ಭಯವಿರಬಾರದು. ಆದರೆ ಜಾಣ್ಮೆಯಿಂದ ವರ್ತಿಸುವುದೂ ಆವಶ್ಯಕವಾಗಿದೆ. ತಬ್ಲೀಗ್ ಮಾಡುವವರ ನಡೆನುಡಿಗಳಲ್ಲಿ ಸಮನ್ವಯತೆ ಸಹ ಆವಶ್ಯಕವಾಗಿದೆ. ಹೇಳುವಂತೆ ಮಾಡುವವರಾಗಬೇಕು. ಅಂತಹ ಸಂದರ್ಭದಲ್ಲಿಯೇ ಜಾಣ್ಮೆಯ ಮಾತುಗಳು ಬಾಯಿಯಿಂದ ಹೊರಡುತ್ತವೆ ಮತ್ತು ಅನ್ಯರ ಮೇಲೆ ಪ್ರಭಾವ ಬೀರುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದರ ಬಗ್ಗೆ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ಅನೇಕ ಮೌಲವಿಗಳು ತಾವು ವಿದ್ವಾಂಸರೆಂದು ಹೇಳಿಕೊಂಡು ಜನರೆದುರಿಗೆ ಹೆಮ್ಮೆಯಿಂದ ತಾವು **ನಾಯಿಬುರ್ರಸೂಲ್** (ಸಂದೇಶವಾಹಕರ ಸಹಾಯಕ) ಎಂದೂ **ವಾರಿಸುಲ್ ಅಂಬಿಯಾ** (ಪ್ರವಾದಿಗಳ ಉತ್ತರಾಧಿಕಾರಿ) ಎಂದೂ ಪ್ರವಚನ ನೀಡುತ್ತಾ ತಿರುಗುತ್ತಿದ್ದಾರೆ. ಅವರು ಹೇಳುತ್ತಾರೆ: ಅಹಂಭಾವ ತೋರಿಸಬೇಡಿರಿ. ಕೆಟ್ಟ ಕೆಲಸ ಮಾಡಬೇಡಿರಿ ಎಂದು. ಆದರೆ ಅವರು ಅದೇ ಕೆಟ್ಟ ಕೆಲಸಗಳನ್ನು

ಮಾಡುವವರಾಗಿರುತ್ತಾರೆ. ಅಂತಹ ಜನರ ಮಾತುಗಳ ಪ್ರಭಾವ ಎಷ್ಟರ ಮಟ್ಟಿಗೆ ಆಗುತ್ತದೆ ಎಂದು ತಿಳಿದು ಅವರ ಬಗ್ಗೆ ಅಂದಾಜು ಮಾಡಬಹುದು. ಹೀಗೆ ಉಪದೇಶಿಸುವ ಮೌಲವಿಗಳು ಸ್ವತಃ ತಮ್ಮ ಉಪದೇಶಗಳ ಪ್ರಕಾರ ವರ್ತಿಸುವವರಾಗಿರುತ್ತಿದ್ದರೆ, ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ **ಲಿಮತಖೂಲೂನ ಮಾಲಾ ತಫ್‌ಅಲೂನ್** (ನೀವು ಮಾಡದುದನ್ನು ಏಕೆ ಹೇಳುತ್ತೀರಿ) ಎಂದು ಹೇಳುವ ಆವಶ್ಯಕತೆ ಏನಿತ್ತು. ಪವಿತ್ರ ಖುರ್‌ಆನಿನ ಈ ವಚನ ಸೂಚಿಸುವುದೇನೆಂದರೆ, ಹೇಳಿದಂತೆ ಮಾಡದೆ ಇರುವವರು ಹಿಂದೆ ಸಹ ಇದ್ದರು ಈಗಲೂ ಇದ್ದಾರೆ ಮತ್ತು ಮುಂದಿನ ಕಾಲದಲ್ಲಿ ಸಹ ಇರುವರು.

ನೀವು ನನ್ನ ಮಾತನ್ನು ನೆನಪಿಟ್ಟುಕೊಳ್ಳಿರಿ. ಮನುಷ್ಯನ ಮಾತು ಸತ್ಯವಾದ ಹೃದಯದಿಂದಲ್ಲವಾದರೆ ಮತ್ತು ಅವನಲ್ಲಿ ನುಡಿದಂತೆ ನಡೆಯುವ ಶಕ್ತಿ ಇಲ್ಲದಿದ್ದರೆ ಅವನ ಮಾತು ಪ್ರಭಾವ ಬೀರದು. ಇದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯತೆ ಸಾಬೀತಾಗುತ್ತದೆ. ಏಕೆಂದರೆ ಅವರಿಗೆ ದೊರೆತ ಜಯ ಮತ್ತು ಹೃದಯಗಳನ್ನು ಪ್ರಭಾವಿಸುವ ಶಕ್ತಿ ಮಾನವ ಚರಿತ್ರೆಯಲ್ಲಿ ಬೇರೆ ಯಾರಲ್ಲೂ ಕಂಡುಬರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಅವರ ನಡೆನುಡಿಗಳಲ್ಲಿ ಸಮನ್ವಯತೆ ಇತ್ತು. ಸತ್ಯವಿಶ್ವಾಸಿ ಎರಡು ಬಗೆಯಲ್ಲಿ ವರ್ತಿಸಬಾರದು. ಯಾವಾಗಲೂ ನಿಮ್ಮ ನಡೆ ನುಡಿ ಸರಿಯಾಗಿರಿಸಿರಿ. ಸಹಾಬರ ಹಾಗೆ ನಡೆನುಡಿಗಳಲ್ಲಿ ಸಮನ್ವಯತೆ ಇರಲಿ. ನೀವು ಸಹ ಸಹಾಬರ ಹೆಜ್ಜೆ ಗುರುತುಗಳನ್ನು ಅನುಸರಿಸಿ ಸತ್ಯ ಮತ್ತು ನಿಷ್ಠೆ ಹೊಂದಿರಿ. ಇಸ್ಲಾಮನ್ನು ಸಂರಕ್ಷಿಸಲು ಮತ್ತು ಸತ್ಯವನ್ನು ಪ್ರಕಟಿಸಲು ನೀವು ಸತ್ಯ ಮುಸ್ಲಿಮರ ಉದಾಹರಣೆಯಾಗಿರಿ. ಇಸ್ಲಾಮಿನ ಒಳಿತನ್ನು ಲೋಕದಲ್ಲಿ ಹರಡಿರಿ.

ಆದುದರಿಂದ ತಬ್ಲೀಬ್ ಮಾಡಲು ನಿಮ್ಮಲ್ಲಿ ಪರಿಶುದ್ಧ ಬದಲಾವಣೆ ಆಗಬೇಕು. ಒಬ್ಬನು ಸತ್ಯ ಮುಸ್ಲಿಮನಾದರೆ ಜನರ ಶ್ರದ್ಧೆಯು ಅವನೆಡೆಗೆ ತಿರುಗದಿರಲು ಸಾಧ್ಯವಿಲ್ಲ. ಜನರು ತಾನಾಗಿಯೇ ಅವನನ್ನು ಗಮನಿಸುವರು. ಅಲ್ಲಾಹನು ನಮಗೆಲ್ಲರಿಗೂ ಈ ರೀತಿ ಕಾರ್ಯ ನಿರ್ವಹಿಸಲು ತೌಫೀಕ್ ನೀಡಿ ಅನುಗ್ರಹಿಸಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. on 08-09-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon